# ಕುಣಿದೂ ಕುಣಿದೂ ಬಾರೆ...

■ ಜ್ಯೋತಿ ಡಿ. ಬೊಮ್ಮಾ
ಕಲೆ: ಭಾಸ್ಕರ್ ಎಲ್

‘ಕುಣೀಲಕ್ಕ ಬರದಿದ್ರ ಅಂಗಳ ಡೊಂಕು’ ಎಂಬ ಗಾದೆ ಮಾತು ಎಲ್ಲರಿಗೂ ಗೊತ್ತಿರುವುದೇ. ಆದರೆ ನಿಜವಾಗಿಯೂ ಅಂಗಳ ಡೊಂಕು ಎಂಬ ಅಭಿಪ್ರಾಯಕ್ಕೆ ಬಂದದ್ದು ನಾವು ಕುಣಿಯುವ (Dance) ಪ್ರಯತ್ನ ಮಾಡಿದ್ದಾಗಲೇ.

ಈಗ ಪ್ರತಿಯೊಂದು ಸಮಾರಂಭಗಳಲ್ಲೂ ಕುಣಿತ ಪ್ರಮುಖ ಆಕರ್ಷಣೆ. ಮದುವೆಯಲ್ಲಂತೂ ಮೆಹಂದಿ ಸಂಗೀತದ ಕಾರ್ಯಕ್ರಮವೇ ಮದುವೆಯ ಹೈಲೈಟ್. ಮದುವೆ ನಿಶ್ಚಯವಾಗುವುದೇ ತಡ ಸಂಬಂಧಿಕರೆಲ್ಲ ಸೇರಿ ಪ್ರ್ಯಾಕ್ಟೀಸ್ ಶುರು ಮಾಡುವುದೆ. ಕೊರಿಯೊಗ್ರಫರ್‌ಗಳು ಮನೆಗೆ ಬಂದು ಹಾಡಿಗೆ ತಕ್ಕಂತೆ ಹೆಜ್ಜೆ ಹಾಕುವುದನ್ನು ಕಲಿಸುತ್ತಾರೆ. ಒಂದು ವಿಶೇಷ ಅಂದರೆ ಈಗ ಡಾನ್ಸ್ ಮಾಡಲು ಹರೆಯದವರಿಗಿಂತ ತುಸು ಹರೆಯ ಸರಿದವರೇ ಹೆಚ್ಚು ಆಸಕ್ತಿ ತೋರುತ್ತಿರುವುದು. ಆಸೆಗೇನು ಗೊತ್ತು, ಇವರು ಚಿಕ್ಕವರು ದೊಡ್ಡವರು ಎಂದು. ಆಸೆಪಡುವುದು ಎಲ್ಲರ ಹಕ್ಕು.

